# ದ್ವಿತೀಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ ಮಾರ್ಚ್ –2020

# 9ನೆಯ ತರಗತಿ ಪ್ರಥಮ ಭಾಷೆ ಕನ್ನಡ

# ಪ್ರಶ್ನೆ ಪತ್ರಿಕೆಯ ನೀಲ ನಕಾಶೆ
# ಮತ್ತು
# ಪ್ರಶ್ನೆ ಪತ್ರಿಕೆ

ಬಸವರಾಜ.ಟಿ.ಎಂ
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ,ರೂಪನಗುಡಿ
ಬಳ್ಳಾರಿ ಪೂರ್ವ ವಲಯ

# ದ್ವಿತೀಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ ಮಾರ್ಚ್ –2020

## 9ನೆಯ ತರಗತಿ
## ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

# ವಿಷಯ : ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 100** **ಅವಧಿ : 3ಗಂಟೆ 15.ನಿ**

**01.ಉದ್ದಿಷ್ಟಾನುಸಾರ ಪ್ರಾಮುಖ್ಯತೆ :**

| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| ಸ್ಮರಣೆ | 21 | 21 | 14 |
| ಗ್ರಹಿಕೆ | 36 | 36 | 19 |
| ಅಭಿವ್ಯಕ್ತಿ | 39 | 39 | 11 |
| ಪ್ರಶಂಸೆ | 04 | 04 | 01 |
| ಒಟ್ಟು | 100 | 100 | 45 |

**02.ಪ್ರಶ್ನಾನುಸಾರ ಪ್ರಾಮುಖ್ಯತೆ :**

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| ವಸ್ತುನಿಷ್ಠ | 10 | 10 | 10 |
| ಕಿರು ಉತ್ತರಗಳು (1) | 07 | 07 | 07 |
| ಕಿರು ಉತ್ತರಗಳು (2) | 20 | 20 | 10 |
| ದೀರ್ಘ ಉತ್ತರಗಳು (1) | 33 | 33 | 11 |
| ದೀರ್ಘ ಉತ್ತರಗಳು (2) | 20 | 20 | 05 |
| ದೀರ್ಘ ಉತ್ತರಗಳು (3) | 10 | 10 | 02 |
| ಒಟ್ಟು | 100 | 100 | 45 |

**03.ಕಠಿಣತೆಯ ಮಟ್ಟ :**

| ಕಠಿಣತೆಯ ಮಟ್ಟ | ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|---|
| ಅಂಕಗಳು | 30 | 50 | 20 | 100 |
| ಪ್ರಶ್ನೆಗಳು | 21 | 19 | 05 | 45 |
| ಪ್ರತಿಶತ | 30% | 50% | 20% | 100% |

## 04.ವಿಷಯಾನುಸಾರ ಪ್ರಾಮುಖ್ಯತೆ :

| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು |
|---|---|---|---|
| ಗದ್ಯ | 28 | 28 | 13 |
| ಪದ್ಯ | 30 | 30 | 11 |
| ಪಠ್ಯ ಪೋಷಕ ಅಧ್ಯಯನ | 09 | 09 | 05 |
| ಅಪಠಿತ ಗದ್ಯ | 04 | 04 | 01 |
| ವ್ಯಾಕರಣಾಂಶಗಳು, ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ | 29 | 29 | 15 |
| ಒಟ್ಟು | 100 | 100 | 45 |

## 05. ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

### 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಕನ್ನಡ ಮೌಲ್ವಿ | 03 | 01 |
| 2 | ಬೆಡಗಿನ ತಾಣ ಜಯಪುರ | 04 | 02 |
| 3 | ಧರ್ಮಸಮದೃಷ್ಟಿ | 03 | 02 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | 04 | 02 |
| 5 | ಪ್ರಜಾನಿಷ್ಠೆ | 04 | 02 |
| 6 | ಜನಪದ ಕಲೆಗಳ ವೈಭವ | 04 | 01 |
| 7 | ಊರುಭಂಗ | 03 | 02 |
| 8 | ಹರಲೀಲೆ | 03 | 01 |
| | ಗದ್ಯ ಒಟ್ಟು | 28 | 13 |

### 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಹೊಸಹಾಡು | 04 | 01 |
| 2 | ಪಾರಿವಾಳ | 03 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | 03 | 01 |
| 4 | ನಿಯತಿಯನಾರ್ ಮೀಱಿದಪರ್ | 04 | 02 |
| 5 | ಮರಳಿ ಮನೆಗೆ | 04 | 01 |
| 6 | ತತ್ತ್ವಪದಗಳು | 04 | 01 |
| 7 | ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು | 04 | 02 |
| 8 | ಕನ್ನಡ ನಾಡು ನುಡಿ | 04 | 02 |
| | ಪದ್ಯ ಒಟ್ಟು | 30 | 11 |

## 3. ಪಠ್ಯಪೋಷಕ ಅಧ್ಯಯನ

| ಕ್ರ.ಸಂ | ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಗುಣಸಾಗರಿ ಪಂಡರೀಬಾಯಿ | 02 | 01 |
| 2 | ರಂಜಾನ್ ಸುರಕುಂಬಾ ಮತ್ತು ಸಂಭ್ರಮದ ಜೋಕಾಲಿ | 02 | 01 |
| 3 | ನನ್ನಾಸೆ | 02 | 01 |
| 4 | ಉರಿದ ಬದುಕು | 01 | 01 |
| 5 | ಪುಟ್ಟಹಕ್ಕಿ | 02 | 01 |
| | ಪಠ್ಯ ಪೋಷಕ ಅಧ್ಯಯನ ಒಟ್ಟು | 09 | 05 |

## 4. ಅಪಠಿತ ಗದ್ಯ

| ಕ್ರ.ಸಂ | ವಿಷಯ | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಅಪಠಿತ ಗದ್ಯ | 04 | 01 |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ವ್ಯಾಕರಣಾಂಶಗಳು | 10 | 10 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ಮಾತು | 03 | 01 |
| 5 | ಪತ್ರಲೇಖನ | 05 | 01 |
| 6 | ಪ್ರಬಂಧ ರಚನೆ | 05 | 01 |
| | ಒಟ್ಟು | 29 | 05 |

## ಪ್ರಶ್ನೆ ಪತ್ರಿಕೆ ಅಂಕ ವಿತರಣೆ :

**ಗದ್ಯ : 28, ಪದ್ಯ : 30, ಪಠ್ಯ ಪೋಷಕ ಅಧ್ಯಯನ : 09, ಅಪಠಿತ ಗದ್ಯ 04,**
**ವ್ಯಾಕರಣ, ಅಲಂಕಾರ, ಛಂದಸ್ಸು ಮತ್ತು ವಾಕ್ಯರಚನೆ : 29 ಒಟ್ಟು : 100**

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಪೋಷಕ ಅಧ್ಯಯನ | ಅಪಠಿತ ಗದ್ಯ | ವ್ಯಾಕರಣ | ವಾಕ್ಯ ರಚನೆ | ಒಟ್ಟು |
|---|---|---|---|---|---|---|---|
| 1. ಬಹು ಆಯ್ಕೆ | *** | *** | *** | *** | 6*1=6 | *** | 6*1=6 |
| 2. ಸಂಬಂಧೀಕರಿಸಿ ಬರೆಯುವುದು | *** | *** | *** | *** | 4*1=4 | *** | 4*1=4 |
| 3. ಒಂದು ವಾಕ್ಯದ ಉತ್ತರಗಳು | 4*1=4 | 2*1=2 | 1*1=1 | *** | *** | *** | 7*1=7 |
| 4. ಮೂರು ನಾಲ್ಕು ವಾಕ್ಯಗಳ ಉತ್ತರಗಳು | 4*2=8 | 2*2=4 | 4*2=8 | *** | *** | *** | 10*2=20 |
| 5. ಐದಾರು ವಾಕ್ಯಗಳ ಉತ್ತರಗಳು – ಸಂದರ್ಭಗಳು | 3*3=9 | 3*3=9 | *** | *** | *** | *** | 6*3=18 |
| 6. ಕವಿ ಕೃತಿ ಪರಿಚಯ | 1*3=3 | 1*3=3 | *** | *** | *** | *** | 2*3=6 |
| 7. ಕಂಠಪಾಠ ಪದ್ಯ | *** | 1*4=4 | *** | *** | *** | *** | 1*4=4 |
| 8. ಪದ್ಯವನ್ನು ಓದಿ ಅರ್ಥೈಸಿಕೊಂಡು, ಅಡಕಗೊಂಡ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು | *** | 1*4=4 | *** | *** | *** | *** | 1*4=4 |
| 9. ಎಂಟು/ಹತ್ತು ವಾಕ್ಯಗಳ ಉತ್ತರಗಳು | 1*4=4 | 1*4=4 | *** | *** | *** | *** | 2*4=8 |
| 10. ಅಪಠಿತ ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು. | *** | *** | *** | 1*4=4 | *** | *** | 1*4=4 |
| 11. ಛಂದಸ್ಸು | *** | *** | *** | *** | 1*3=3 | *** | 1*3=3 |
| 12. ಅಲಂಕಾರ | *** | *** | *** | *** | 1*3=3 | *** | 1*3=3 |
| 13. ಗಾದೆಗಳು | *** | *** | *** | *** | *** | 1*3=3 | 1*3=3 |
| 14. ಪತ್ರ ಲೇಖನ | *** | *** | *** | *** | *** | 1*5=5 | 1*5=5 |
| 15. ಪ್ರಬಂಧ ರಚನೆ | *** | *** | *** | *** | *** | 1*5=5 | 1*5=5 |
| ಒಟ್ಟು ಅಂಕಗಳು | 28 | 30 | 09 | 04 | 16 | 13 | 100 |

# 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ – ದ್ವಿತೀಯ ಸಂಕಲನಾತ್ಮಕ ಮೌಲ್ಯಮಾಪನ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

| ಕ್ರ ಸಂ. | ಪಾಠದ ಹೆಸರು | ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | ಪ್ರಶಂಸೆ | ಒಟ್ಟು | | | | | | | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ.ಉ. 1 | ದೀ.ಉ. 1 | ದೀ.ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ. 1 | ದೀ ಉ. 2 | ದೀ ಉ. 1 | ದೀ.ಉ. 2 | ದೀ ಉ. 3 | ದೀ ಉ. 3 | ವ. ನಿ | ಕಿ.ಉ. 1 | ಕಿ.ಉ. 2 | ದೀ.ಉ. 1 | ದೀ.ಉ. 2 | ದೀ.ಉ. 3 | ಅಂಕಗಳು | |
| 1 | ಕನ್ನಡ ಮೌಲ್ವಿ | | | | | | | | | | 1(3) | | | | | | | 1(3) | | | 03 | 01 |
| 2 | ಬೆಡಗಿನ ತಾಣ ಜಯಪುರ | | | 1(3) | | | 1(1) | | | | | | | | | 1(1) | | 1(3) | | | 04 | 02 |
| 3 | ಧರ್ಮಸಮದೃಷ್ಟಿ | | 1(1) | | | | | 1(2) | | | | | | | | 1(1) | 1(2) | | | | 03 | 02 |
| 4 | ಆದರ್ಶ ಶಿಕ್ಷಕ ರಾಧಾಕೃಷ್ಣನ್ | | | | | | | 2(2) | | | | | | | | | 2(2) | | | | 04 | 02 |
| 5 | ಪ್ರಜಾನಿಷ್ಠೆ | | 1(1) | | | | | | | | 1(3) | | | | | 1(1) | | 1(3) | | | 04 | 02 |
| 6 | ಜನಪದ ಕಲೆಗಳ ವೈಭವ | | | | | | | | | | | 1(4) | | | | | | | 1(4) | | 04 | 01 |
| 7 | ಊರುಭಂಗ | | 1(1) | | | | | 1(2) | | | | | | | | | 1(2) | | | | 03 | 02 |
| 8 | ಹರಲೀಲೆ | | | | | | | | | | 1(3) | | | | | 1(1) | | | | | 03 | 01 |
| | **ಗದ್ಯ ಒಟ್ಟು** | | **3(1)** | **1(3)** | | | **1(1)** | **4(2)** | | | **3(3)** | | | | | **4(1)** | **4(2)** | **3(3)** | **1(4)** | | **28** | **03** |
| 1 | ಹೊಸಹಾಡು | | | | 1(4) | | | | | | | | | | | | | | 1(4) | | 04 | 01 |
| 2 | ಪಾರಿವಾಳ | | | | | | | | | | 1(3) | | | | | | | 1(3) | | | 03 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | | | | | | | | | | 1(3) | | | | | | | 1(3) | | | 03 | 01 |
| 4 | ನಿಯತಿಯನಾರ್ ಮೀಜಿದಪರ್ | | | | | | | 2(2) | | | | | | | | | 2(2) | | | | 04 | 02 |
| 5 | ಮರಳಿ ಮನೆಗೆ | | | | | | | | | | | | | 1(4) | | | | | 1(4) | | 04 | 01 |
| 6 | ತತ್ತ್ವಪದಗಳು | | | | | | | | | | | 1(4) | | | | | | | 1(4) | | 04 | 01 |
| 7 | ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು | | | 1(3) | | | 1(1) | | | | | | | | | 1(1) | | 1(3) | | | 04 | 02 |
| 8 | ಕನ್ನಡ ನಾಡು ನುಡಿ | | 1(1) | | | | | | | | 1(3) | | | | | 1(1) | | 1(3) | | | 04 | 02 |
| | **ಪದ್ಯ ಒಟ್ಟು** | | **1(1)** | **1(3)** | **1(4)** | | **1(1)** | **2(2)** | | | **3(3)** | | | | | **2(1)** | **2(2)** | **4(3)** | **3(4)** | | **30** | **11** |
| 1 | ಗುಣಸಾಗರಿ ಪಂಡರೀಬಾಯಿ | | | | | | | 1(2) | | | | | | | | | 1(2) | | | | 02 | 01 |
| 2 | ರಂಜಾನ್ ಸುರಕುಂಬಾ ಮತ್ತು | | | | | | | 1(2) | | | | | | | | | 1(2) | | | | 02 | 01 |
| 3 | ನನ್ನಾಸೆ | | | | | | | 1(2) | | | | | | | | | 1(2) | | | | 02 | 01 |
| 4 | ಉರಿದ ಬದುಕು | | 1(1) | | | | | | | | | | | | | 1(1) | | | | | 01 | 01 |
| 5 | ಪುಟ್ಟಹಕ್ಕಿ | | | | | | | 1(2) | | | | | | | | | 1(2) | | | | 02 | 01 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | | **1(1)** | | | | | **4(2)** | | | | | | | | **1(1)** | **4(2)** | | | | **05** | **05** |
| | **ಅಪಠಿತ ಗದ್ಯ ಒಟ್ಟು** | | | | | | | | | **1(4)** | | | | | | | | | 1(4) | | **04** | **01** |
| 1 | ವ್ಯಾಕರಣಾಂಶಗಳು | 6(1) | | | | **4(1)** | | | | | | | | | 10(1) | | | | | | 10 | 10 |
| 2 | ಅಲಂಕಾರ | | | | | | | | 1(3) | | | | | | | | | | | | 03 | 01 |
| 3 | ಛಂದಸ್ಸು | | | | | | | | 1(3) | | | | | | | | | | | | 03 | 01 |
| 4 | ಗಾದೆಮಾತು | | | | | | | | | | 1(3) | | | | | | | | | | 03 | 01 |
| 5 | ಪತ್ರ ಬರೆಹ | | | | | | | | | | | | 1(5) | | | | | | | 1(5) | 05 | 01 |
| 6 | ಪ್ರಬಂಧ ಬರೆಹ | | | | | | | | | | | | 1(5) | | | | | | | 1(5) | 05 | 01 |
| | ಒಟ್ಟು | **6(1)** | | | | **4(1)** | | | **2(3)** | | **1(3)** | | **2(5)** | | 10(1) | 7(1) | 10(2) | 8(3) | 5(4) | 2(5) | **29** | **15** |
| | **ಸಮಗ್ರ ಒಟ್ಟು** | **6(10)** | **5(1)** | **2(3)** | **1(4)** | **4(1)** | **2(1)** | **10(2)** | **2(3)** | **1(4)** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **8(3)** | **5(4)** | **2(5)** | **100** | **45** |
| | **ಸಮಗ್ರ ಅಂಕಗಳು** | **21** | | | | **36** | | | | | **39** | | | **4** | **100** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# ದ್ವಿತೀಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ ಮಾರ್ಚ್ –2020
## ಪ್ರಥಮ ಭಾಷೆ ಕನ್ನಡ
## 9ನೇ ತರಗತಿ

**ಗರಿಷ್ಠ ಅಂಕ : 100** **ಅವಧಿ:3.ಗಂಟೆ 15 ನಿಮಿಷ**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **1*6=6**

**1. ಕನ್ನಡ ವರ್ಣಮಾಲೆಯಲ್ಲಿನ ಸ್ವರಾಕ್ಷರಗಳ ಸಂಖ್ಯೆ :**

(ಎ) 49 (ಬಿ) 13
(ಸಿ) 25 (ಡಿ) 9

**2. ಬೆಟ್ಟದಾವರೆ–ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ :**

(ಎ) ಕ್ರಿಯಾ ಸಮಾಸ (ಬಿ) ಕರ್ಮಧಾರೆಯ ಸಮಾಸ
(ಸಿ) ತತ್ಪುರುಷ ಸಮಾಸ (ಡಿ) ಬಹುವ್ರೀಹಿ ಸಮಾಸ

**3. ಸವರ್ಣದೀರ್ಘಸಂಧಿ ಪದ :**

(ಎ) ಗುರುವನ್ನು (ಬಿ) ಹುಲಿದೊಗಲು
(ಸಿ) ಇವನೊಬ್ಬ (ಡಿ) ವಿದ್ಯಾಭ್ಯಾಸ

**4. ಶರಣರನ್ನು ಪದದಲ್ಲಿನ ವಿಭಕ್ತಿ ಹೆಸರು :**

(ಎ) ಪ್ರಥಮ (ಬಿ) ದ್ವಿತೀಯಾ
(ಸಿ) ತೃತೀಯಾ (ಡಿ) ಚತುರ್ಥಿ

**5. ವರ್ತಮಾನ ಕಾಲದ ಕ್ರಿಯಾಪದ :**

(ಎ) ತಿನ್ನುತ್ತೇನೆ (ಬಿ) ತಿಂದನು
(ಸಿ) ತಿನ್ನುವೆನು (ಡಿ) ತಿಂದರು

**6. ಶಿಲ್ಪಿಗಳು ಶಿಲೆಗಳಿಂದ ಗುಡಿಯನ್ನು ಕಟ್ಟಿದರು – ಈ ವಾಕ್ಯದಲ್ಲಿರುವ ಧಾತುಪದ:**

(ಎ) ಶಿಲ್ಪಿ (ಬಿ) ಶಿಲೆ
(ಸಿ) ಗುಡಿ (ಡಿ) ಕಟ್ಟು

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4*1=4**

7. ಮ್ಯಾಲೆ : ಮೇಲೆ : : ಬ್ಯಾಡಾ : ______________

8. ನಿತ್ಯ : ಅನಿತ್ಯ : : ಸತ್ಯ : ______________

9. ಭಿನ್ನಹ : ಅರಿಕೆ : : ವಿಭು : ______________

10. ವರ್ಷ : ವರುಷ : : ರಾಯ : ______________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **1*7=7**

11. ಜಯಪುರದ ಸಮೀಪದಲ್ಲಿರುವ ಖಗೋಳ ವಿಜ್ಞಾನದ ಪರಿಶೀಲನಾಲಯದ ಹೆಸರೇನು ?
12. ಬುಕ್ಕರಾಯನ ರಾಜ್ಯಭಾರದ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು ?
13. ಹೊಯ್ಸಳ ಸಾಮ್ರಾಜ್ಯದ ಪ್ರಗತಿಯನ್ನು ಕಂಡ ಯಾರ ಕಣ್ಣುಗಳು ಕಿಸುರಾದವು ?
14. ಗದಾಯುದ್ಧ ಯಾರ ಯಾರ ನಡುವೆ ನಡೆಯಿತು ?
15. ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಎಂದು ಗಾನರಾಣಿಯರು ಯಾರಿಗೆ ಕೇಳಿದರು ?
16. ಮಹಲಿಂಗರಂಗ ಕವಿಯ ಪ್ರಕಾರ ಸುಲಿದ ಬಾಳೆಯ ಹಣ್ಣಿನಂತೆ ಇರುವ ಭಾಷೆ ಯಾವುದು ?
17. ತಿಪ್ಪಣ್ಣನನ್ನು ಗಪ್ಪನೆ ಬಲವಾಗಿ ಹಿಡಿದುಕೊಂಡವರು ಯಾರು ?

**IV. ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **10*2=20**

18. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳಾವುವು ?
19. ರಾಧಾಕೃಷ್ಣನ್ ಅವರನ್ನು ಕುರಿತು ಸ್ಟಾಲಿನ್ ಏನು ಹೇಳಿದರು ?
20. ಶಿಕ್ಷಣದ ಮಹತ್ತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ ?
21. ದುರ್ಯೋಧನನು ತನ್ನ ಮುದ್ದು ಮಗನಾದ ದುರ್ಜಯನಿಗೆ ಏನು ಹೇಳಿದನು ?
22. ಚಂಡಮಾರಿ ದೇವಿಯ ಜಾತ್ರೆ ಯಾವಾಗ ಮತ್ತು ಹೇಗೆ ನಡೆಯುತ್ತಿತ್ತು ?
23. ಅಭಯರುಚಿಯು ಅಭಯಮತಿಗೆ ಏನೆಂದು ಧೈರ್ಯವನ್ನು ಹೇಳಿದನು ?
24. ಪಂಡರಿಬಾಯಿ ನಾಟಕ ರಂಗಕ್ಕೆ ಪ್ರವೇಶಿಸಬೇಕಾಗಿ ಬಂದದ್ದು ಯಾಕೆ ?
25. ರಂಜಾನ್ ಹಬ್ಬದ ಸಮಯದಲ್ಲಿ ತಯಾರಿಸುವ ಖಾದ್ಯಗಳಾವುವು ?
26. ಅಳುವ ಕಂದನ ನಗಿಸಲು ಮತ್ತು ಮಾನವನ ಅಜ್ಞಾನತೆ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ ?
27. ಭೂಮಿ–ಆಕಾಶದಲ್ಲಿ ಪುಟ್ಟಹಕ್ಕಿಗೆ ಯಾರ ಭಯವಿದೆ ?

**V. ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2*3=6**

28. ಶಿವರಾಮ ಕಾರಾಂತರು
29. ರಾಘವಾಂಕ

**VI. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

30. ನಿಂದು ನರಪತಿ ತಳಾಱಿಂ
ಗಂದಂ ನೀನ್ ಬರಿಸು ಮನುಜಯುಗಮಂ ಮುನ್ನಂ

**VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ.** **1*3=3**

31. ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*3=3**

32. ಅತಿಯಾಸೆ ಗತಿಗೇಡು

**ಅಥವಾ**

ಕಾಯಕವೇ ಕೈಲಾಸ

**IX. ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6*3=18**

33. " ನಾನು ಕಲಿತಿದ್ದು ಉರ್ದು, ಕಲಿಸಿದ್ದು ಕನ್ನಡ "
34. " ತಕ್ಕಳಪ್ಪ ಇದು ನೀನು ಕೊಟ್ಟ ಹೊಲದಾಗೆ ಸಿಕ್ಕಿತು."
35. " ನೀನತ್ಯಂತ ಕರುಣಿ "

36. " ಮುದ್ದು ಮರಿಗಳ ಮಧುರ ಸದ್ದು ಕೇಳಿ"
37. " ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು "
38 " ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ "

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** **1*4=4**

39. ನವಭಾವ ____________________

__________

____________________

ವೀರಧ್ವನಿಯೇರಬೇಕು

**ಅಥವಾ**

ಜಾತಿ–ಕುಲ ____________________

______________

____________________

__________ಗುಡುಗಬೇಕು

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿ**

40. ಬಹುಜನತೆಯ ಹಿತವೇ ಬಹುಜನತೆಯ ಸುಖವು **1*4=4**
ನಮ್ಮುಸಿರ ನೀತಿಯು ನಮ್ಮನೆಯ ರೀತಿಯು
ಮಹಾಮನೆಯ ಮಹಾಮಂತ್ರ ಸಾರಿರೋ ನೀವೆಲ್ಲ
ದಿವ್ಯಜಗದ ಭವ್ಯ ಮನುಜರಾಗಿ ನೀವು ಬಾಳಿರೊ

**XII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. " ವೀರಗಾಸೆ ಮತ್ತು ವೀರಭದ್ರನ ಕುಣಿತ ವಿಭಿನ್ನವಾಗಿವೆ " ಎಂಬುದನ್ನು ಸಮರ್ಥಿಸಿ ಬರೆಯಿರಿ

**ಅಥವಾ**

" ಕಂಸಾಳೆ ಇದೊಂದು ಜನಪದ ಧಾರ್ಮಿಕ ವಾದ್ಯ" ಹೇಗೆ ವಿವರಿಸಿ.

42. 'ಗುರುಕರುಣೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಬಿದಿರಿನ ಮಹತ್ವವನ್ನು ಸಂತ ಶಿಶುನಾಳ ಷರೀಫರು ಹೇಗೆ ಕೊಂಡಾಡಿದ್ದಾರೆ ? ವಿವರಿಸಿ

**XIII.ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4=(2+2)**

ಮನುಷ್ಯನ ಮನಸ್ಸು ಈಡೇರದ, ತುಚ್ಛವಾದ ಆಸೆಗಳ ಸುಳಿಗೆ ಸಿಲುಕಿ ನೆಲೆಯೇ ಇಲ್ಲದೇ ಅಲೆದಾಡುತ್ತದೆ. ಇಂತಹ ಜೀವನವು ಅತ್ಯಂತ ಕನಿಷ್ಠವಾದುದು. ಮನುಷ್ಯನಿಗೆ ತನ್ನ ಜೀವನದಲ್ಲಿ ಒಂದು ಗುರಿ ಇರಬೇಕು. ಮೊಗ್ಗಿನಂತೆ ಇರುವ ಗುರಿಯು ಆತನ ಶ್ರಮ, ಶ್ರದ್ಧೆಗಳಿಂದ ಹೂವಾಗಿ ಅರಳಿ ಫಲವನ್ನು ಪಡೆದು ಬಾಳಿನ ಅಂತ್ಯ ಕಾಣಬೇಕು. ತಾವರೆ ಕೆಸರಿನಲ್ಲಿ ಹುಟ್ಟಿದರೂ ಆಕಾಶದಲ್ಲಿ ಇರುವ ಸೂರ್ಯನ ಕಿರಣಗಳನ್ನು ನೋಡಿ ತಾನು ಅರಳಿ ಸುಂದರವಾಗಿ ಕಾಣಿಸುತ್ತದೆ. ಈ ರೀತಿಯ ಧ್ಯೇಯವನ್ನು ಇಟ್ಟುಕೊಂಡು ದುಡಿಮೆಗೆ ಶರಣಾಗುತ್ತ ಬದ್ಧತೆಯಿಂದ ಕೆಲಸ ಮಾಡಬೇಕು ಆಗ ಜೀವನದಲ್ಲಿ ಸಾರ್ಥಕತೆ ಸಿಗುತ್ತದೆ.

ಒಂದು ಬಾಣಕ್ಕೆ ಒಂದೆ ಗುರಿ ಅನೇಕ ಗುರಿಗಳು ಇರಲು ಸಾಧ್ಯವಿಲ್ಲ. ಒಂದು ದೇಹದಲ್ಲಿ ಒಂದೇ ಆತ್ಮ ಇರುತ್ತದೆ. ಹಾಗಾಗಿ ಒಂದು ಜೀವನದಲ್ಲಿ ಹಲವು ಗುರಿಗಳು ಏಕೆ? ಒಂದೇ ದೊಡ್ಡ ಗುರಿಯನ್ನು ಇಟ್ಟುಕೊಂಡು ಹಗಲುರಾತ್ರಿ ಗುರಿ ಸಾಧನೆಗೆ ಹೋರಾಡು. 'ಜನತಾ ಜನಾರ್ಧನ' ಎಂಬಂತೆ ಮನುಷ್ಯನಲ್ಲಿ ನಾರಾಯಣನನ್ನು ಕಾಣಬೇಕು. ಈ ಭೂಲೋಕದಲ್ಲಿ ಸ್ವರ್ಗದ ಸೌಂದರ್ಯ, ಸಂಪತ್ತನ್ನು ಕಂಡುಕೊಳ್ಳುತ್ತಾ, ಸ್ವಾರ್ಥಕ್ಕಾಗಿ ಬದುಕದೆ, ಪರರ ಸುಖಕ್ಕಾಗಿ, ಪರರಿಗೆ ಉಪಕಾರ ಮಾಡುತ್ತ, ಬದುಕುವುದೆ, ಪರರ ಸುಖಕ್ಕಾಗಿ ಪರರಿಗೆ ಉಪಕಾರ ಮಾಡುತ್ತ, ಬದುಕುವುದೆ ನಿಜವಾದ ಜೀವನ. ಅದನ್ನು ಬಿಟ್ಟು ಸ್ವಾರ್ಥದಿಂದ ಸಂಕುಚಿತ ಮನೋಭಾವವನ್ನು ಹೊಂದಿದರೆ ಅದು ನಮಗೆ ಅಪಕೀರ್ತಿಯನ್ನು ಉಂಟು ಮಾಡುತ್ತದೆ.

.

**ಪ್ರಶ್ನೆಗಳು :**

43. ಅ) ಮನುಷ್ಯನ ಜೀವನದಲ್ಲಿ ಸಾರ್ಥಕತೆ ಯಾವಾಗ ಸಿಗುತ್ತದೆ.

ಆ) ಈ ಲೇಖನದ ಪ್ರಕಾರ ನಿಜವಾದ ಜೀವನ ಎಂದರೆ ಯಾವುದು ?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನಾಧರಿಸಿ ಪತ್ರ ಬರೆಯಿರಿ. 1*5=5**

44. ನಿಮ್ಮನ್ನು ಬಳ್ಳಾರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುರಭಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಕ್ರೀಡಾಕೂಟವನ್ನು ಕುರಿತು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮ ಶಾಲೆಯಲ್ಲಿ 9ನೇ ತರಗತಿ ಓದುತ್ತಿರುವ ಸಮಂತ ಎನ್ನುವ ನಿಮ್ಮ ಸ್ನೇಹಿತ/ತೆಗೊಂದು ಪತ್ರಬರೆಯಿರಿ.

**ಅಥವಾ**

ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಕಿರಣ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದ ಕುರಿತು ಪತ್ರಿಕೆಯಲ್ಲಿ ಪ್ರಕಟಿಸುವಂತೆ ವಿಜಯವಾಣಿ ಪತ್ರಿಕೆಯ ಸಂಪಾದಕರಿಗೆ ಪತ್ರಬರೆಯಿರಿ.

**XV. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

45. ವಿದ್ಯಾರ್ಥಿಗಳಿಗೆ ಸರ್ಕಾರದ ಸೌಲಭ್ಯಗಳು

**ಅಥವಾ**

ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ